ಅಮೂಲಾಗ್ರವಾಗಿ ಬದಲಾವಣೆಯನ್ನು ಮಾಡಿ ಮುಂದಿನ ದಿವಸಗಳಲ್ಲಿ ಇದನ್ನು ಸರಿ ಮಾಡುತ್ತೇವೆ. ಈಗಾಗಲೇ ಸಪ್ಲಿಮೆಂಟರಿ ಪರೀಕ್ಷೆಯನ್ನು ಮಾಡಿದ್ದೇವೆ, ನಾನು ಇಷ್ಟು ವಿಷಯಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ಇನ್ನು ನನ್ನ ಎರಡನೆಯ ಪ್ರಶ್ನೆ ಏನೆಂದರೆ, ಪ್ರಶ್ನೆ ಪತ್ರಿಕೆಗಳು ಬಹಿರಂಗವಾದದ್ದರ ಬಗ್ಗೆ ತಾವು ಇದನ್ನು ಸಿ.ಒ.ಡಿ. ತನಿಖೆಗೆ ಕೊಟ್ಟಿದ್ದೀರೆಂಬ ವಿಚಾರವಿದೆ. ಇದರ ಬಗ್ಗೆ ವರದಿ ಬಂದಿದೆಯಾ? ತುಮಕೂರು ಮತ್ತು ಬೆಂಗಳೂರ್‌ನಲ್ಲಿ ಬೇರೆ ಬೇರೆ ಹಿಂದಿ ಪ್ರಶ್ನೆ ಪತ್ರಿಕೆಗಳನ್ನು ಕೊಟ್ಟಿರುವಂಥಾದ್ದು ನನ್ನ ಗಮನಕ್ಕೆ ಬಂದಿದೆ. ಹೀಗೆ ಬಹಿರಂಗವಾಗಿರುವಂಥಾದ್ದರ ಬಗ್ಗೆ ತಾವು ಡಿಫೆಂಡ್ ಮಾಡುವುದು ಏಕೆ? ಇನ್ನು ಮುಂದೆ ಇದು ಆಗದ ರೀತಿಯಲ್ಲಿ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಎರಡನೆಯದಾಗಿ ಮುಂದಿನ ಮಾರ್ಚ್ ತಿಂಗಳಲ್ಲಿ ಪರೀಕ್ಷಾ ಸಂದರ್ಭದಲ್ಲಿ ಇಂತಹ ಲೋಪದೋಷಗಳು ಆಗದ ಹಾಗೆ ಯಾವ ರೀತಿಯಲ್ಲಿ ಕಟ್ಟೆಚ್ಚರವನ್ನು ತೆಗೆದುಕೊಳ್ಳುತ್ತೀರೆಂಬುದನ್ನು ತಾವು ಹೇಳಬೇಕು, ಮತ್ತೆ ಜನತೆಗೆ ಯಾವ ರೀತಿಯಲ್ಲಿ ಸಂದೇಶವನ್ನು ಕೊಡುತ್ತೀರೆಂಬುದನ್ನು ಹೇಳಬೇಕು.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಪತ್ರಿಕೆ ಬಯಲಾಗಿರಲಿಲ್ಲ, ಆದರೆ ಕೆಲವು ಹೇಳಿಕೆಗಳು, ಅನುಮಾನಗಳಿಂದ ಇದನ್ನು ಸಿ.ಒ.ಡಿ. ಯವರಿಗೆ ಕೊಟ್ಟಿದ್ದೆವು. ನಾನು ಈ ವಿಷಯವಾಗಿ ಹೇಳಬೇಕೆಂದರೆ, ಶ್ರೀ ರಾಮನು ಸೀತೆ ಮಾಡದ ತಪ್ಪಿಗೆ ಅಗ್ನಿ ಪ್ರವೇಶ ಮಾಡುವುದಕ್ಕೆ ಹೇಳಿದ, ಆ ರೀತಿಯಲ್ಲಿ ಆ ಅಲ್ಪನ ಮಾತು ಏನು ಯಾರು ಎಂದು ಆಗಿತ್ತು. ಶ್ರೀರಾಮಚಂದ್ರ ಮಾಡಿದ ರೀತಿಯಲ್ಲೇ ಏನಾದರೂ ಆಗಿದೆಯೇ ಎಂಬುದನ್ನು ನಾವು ಕನ್‌ಫರ್ಮ್ ಮಾಡಿಕೊಳ್ಳಬೇಕೆಂದು ಇದನ್ನು ಸಿ.ಒ.ಡಿ.ಯವರಿಗೆ ಕೊಟ್ಟಿದ್ದೆವು.

ಹುಲ್‌ಸೂರಿನಲ್ಲಿ ಹೊಸದಾಗಿ ನಿರ್ಮಿಸಿರುವ ಆಸ್ಪತ್ರೆಗಳ ಕಟ್ಟಡ.

208(1957)

ಶ್ರೀ ರಾಜೇಂದ್ರ ವರ್ಮ(ಹುಲ್‌ಸೂರ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಸೂರಿನಲ್ಲಿ ಹೊಸದಾಗಿ ನಿರ್ಮಿಸಿರುವ ಆಸ್ಪತ್ರೆಯ ಕಟ್ಟಡವನ್ನು ಜಿಲ್ಲಾ ಪಂಚಾಯ್ತಿಯವರಿಂದ ಆರೋಗ್ಯ ಇಲಾಖೆಗೆ ತೆಗೆದುಕೊಳ್ಳಲಾಗಿದೆಯೆ?

ಆ) ತೆಗೆದುಕೊಳ್ಳದಿದ್ದಲ್ಲಿ ಕಾರಣಗಳೇನು?

ಇ) ಆರೋಗ್ಯ ಇಲಾಖೆಯರು ಶೀಘ್ರವೇ ಈ ಕಟ್ಟಡವನ್ನು ವಹಿಸಿಕೊಂಡು ಮಾನ್ಯ ಸಚಿವರು ಪ್ರಕಟಿಸಿರುವಂತೆ 30 ಹಾಸಿಗೆಗಳ ಆಸ್ಪತ್ರೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವರೆ?

ಈ) ಇಲ್ಲದಿದ್ದಲ್ಲಿ ಕಾರಣಗಳೇನು?

ಡಾ॥ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಕಟ್ಟಡದ ಕಾಮಗಾರಿಕೆಯನ್ನು ಸರಿಯಾಗಿ ಮಾಡಿರುವುದಿಲ್ಲ. ಹಾಗೂ ಕಟ್ಟಡವು ಸೋರುತ್ತಿದೆ. ಇನ್ನೂ ಕೆಲವು ಸಣ್ಣ ಪುಟ್ಟ ಕಾಮಗಾರಿಗಳನ್ನು ಮಾಡಿಲ್ಲದ ಕಾರಣ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವುದಿಲ್ಲ.

ಇ) ಕಟ್ಟಡವನ್ನು ಪೂರ್ಣಗೊಳಿಸಿದ ನಂತರ ವಹಿಸಿಕೊಳ್ಳಲಾಗುವುದು ಹಾಗೂ 30 ಹಾಸಿಗೆಯ ಸಮುದಾಯ ಆರೋಗ್ಯ ಕೇಂದ್ರ ಕೇಂದ್ರವನ್ನಾಗಿ ಮೇಲ್ಪರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯತ್ ಬೀದರ್ ಮುಖಾಂತರ ಸರ್ಕಾರಕ್ಕೆ ಬಂದಿದ್ದು, ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಉದ್ಭವಿಸುವುದಿಲ್ಲ.

ಶ್ರೀ ರಾಜೇಂದ್ರ ವರ್ಮ: ಮಾನ್ಯ ಅಧ್ಯಕ್ಷರೇ, ಡಾ॥ ಮಾಲಕರೆಡ್ಡಿಯವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಆರೋಗ್ಯ ಸಚಿವರು ಆಗಿದ್ದಾರೆ. ಅವರಿಗೆ ನಮ್ಮ ಜಿಲ್ಲೆಯ ಬಗ್ಗೆ ಕಳಕಳಿ ಇದೆ, ಆದರೆ ನಾನು ಅವರನ್ನು ಕೇಳುವಂತಹ ಪ್ರಶ್ನೆ ಏನೆಂದರೆ, ಹೊಸದಾಗಿ ನಿರ್ಮಿಸಿರುವ ಆಸ್ಪತ್ರೆಯ ಕಟ್ಟಡವನ್ನು ಜಿಲ್ಲಾ ಪಂಚಾಯತ್‌ನವರಿಂದ ಆರೋಗ್ಯ ಇಲಾಖೆಗೆ ತೆಗೆದುಕೊಳ್ಳಲಾಗಿದೆಯೆ ಎಂದು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಏಕೆ? ಎಂದು ಕೇಳಿದರೆ ಕಟ್ಟಡದ ಕಾಮಗಾರಿಯನ್ನು ಸರಿಯಾಗಿ ಮಾಡಿರುವುದಿಲ್ಲ, ಹಾಗೂ ಕಟ್ಟಡ ಸೋರುತ್ತಿದೆ, ಇನ್ನು ಕೆಲವು ಸಣ್ಣಪುಟ್ಟ ಕಾಮಗಾರಿಗಳು ಬಾಕಿ ಉಳಿದಿದೆ, ಅದಕ್ಕೆ ಇಲ್ಲವೆಂದು ಹೇಳಿದ್ದಾರೆ. ಈಗ ಸುಮಾರು ಆರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ. ನಾವು ಈ ಕಟ್ಟಡವನ್ನು ಒಂದು ದಿವಸವೂ ಉಪಯೋಗಿಸಿಲ್ಲ. ಇದಕ್ಕೆ ಈಗ ಸರ್ಕಾರದಲ್ಲೂ ದುಡ್ಡು ಉಳಿದಿಲ್ಲ, ಮತ್ತೆ ನಮಗೂ ಈ ಕಟ್ಟಡ ಉಪಯೋಗವಾಗಿಲ್ಲ. ಈ ಕಟ್ಟಡವನ್ನು ಕಟ್ಟಿದಂಥವರು ಯಾರು? ಯಾರು ತಪ್ಪು ಮಾಡಿದ್ದಾರೆ? ಇದಕ್ಕೆ ಹೊಣೆಗಾರರು ಯಾರು? ಇವರ ಮೇಲೆ ಏನು ಆ್ಯಕ್ಷನ್

ತೆಗೆದುಕೊಳ್ಳುತ್ತೀರಿ? ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಹೇಳಬೇಕು, ಮತ್ತೆ ಯಾವ ವರ್ಷದಲ್ಲಿ ಇದನ್ನು ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು.

ಡಾ॥ ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೇ, ಹುಲಸೂರಿನಲ್ಲಿ ಮೊದಲು ಪ್ರಾಥಮಿಕ ಆರೋಗ್ಯ ಕೇಂದ್ರವಿತ್ತು. ಅದನ್ನು ಮೇಲ್ದರ್ಜೆಗೆ ಏರಿಸಬೇಕೆಂದರೆ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಆದರೆ ಜಿಲ್ಲಾ ಪಂಚಾಯತ್‌ನವರು ಈ ಒಪ್ಪಿಗೆಯನ್ನು ಪಡೆಯದೇ ರೆಸಲ್ಯೂಷನ್ ಅನ್ನು ಪಾಸ್ ಮಾಡಿಕೊಂಡು ಅವರೇ ಇದನ್ನು ಮೇಲ್ದರ್ಜೆಗೆ ಏರಿಸಿ ಕಟ್ಟಡನ್ನು ಕಟ್ಟಿದ್ದಾರೆ. ಹುಲಸೂರು ಒಂದು ದೊಡ್ಡ ಹಳ್ಳಿ ಹಾಗೂ ಮತಕ್ಷೇತ್ರ ಕೂಡ ಆಗಿದೆ. ನಾನು ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳಿ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ನೋಡಿಕೊಂಡು ಬರಲು ಹೇಳಿದ್ದೆ, ಆ ಕಟ್ಟಡ ಸಂಪೂರ್ಣವಾಗಿ ದುಃಸ್ಥಿತಿಯಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ಇದನ್ನು ಯಾರು ಕಟ್ಟಿದ್ದಾರೋ, ಅವರು ಕಂಟ್ರಾಕ್ಟರೋ, ಇಲಾಖೆಯವರೋ, ಲ್ಯಾಂಡ್ ಆರ್ಮಿಯವರಿಂದ ಕಟ್ಟಿಸಿದ್ದಾರೋ, ಅವರ ಮೂಲಕ ಇದನ್ನು ಸರಿಪಡಿಸಬೇಕಾಗುತ್ತದೆ. ಇದಾದ ಮೇಲೆ ಸರ್ಕಾರ ಇದನ್ನು ಸಹಾನುಭೂತಿಯಿಂದ ಪರಿಗಣಿಸಿ 30 ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಮಾಡಿ ಮೇಲ್ದರ್ಜೆಗೆ ಏರಿಸುತ್ತೇವೆ.

ಶ್ರೀ ರಾಜೇಂದ್ರ ವರ್ಮ: ಅವರಿಗೆ ಸಂಪೂರ್ಣವಾಗಿ ಮಾಹಿತಿ ಇದೆ, ಈಗ ದುರಸ್ತಿ ಮಾಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಂಡರೆ, ಈಗ ಇರುವುದೂ ಸಹ ಬಿದ್ದು ಹೋಗುತ್ತದೆ, ಆದುದರಿಂದ ಮಾನ್ಯ ಸಚಿವರು ಏನಾದರೂ ಸೂಕ್ತ ಕ್ರಮ ತೆಗೆದುಕೊಂಡು ಈ ವರ್ಷದಲ್ಲೇ ಅದನ್ನು ವಶಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಎ.ಬಿ.ಮಾಲಕರೆಡ್ಡಿ: ತಾವೂ ಕೂಡ ಎಕ್ಸ್-ಅಫಿಷಿಯೋ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದೀರಿ, ಅದನ್ನು ಅಲ್ಲಿ ಪ್ರಸ್ತಾಪ ಮಾಡಿಸಿ, ಜಿಲ್ಲಾ ಪಂಚಾಯತ್‌ವರಿಗೆ ಹೇಳಿ ರಿಪೇರಿ ಮಾಡಿಸಬೇಕು.

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಶೋಧನೆ ನಡೆಸುವುದು.

209(2032)

ಶ್ರೀ ಸಿ.ಚನ್ನಿಗಪ್ಪ(ಕೊರಟಗೆರೆ): ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?